# ಮಾಧ್ಯಮಗಳ ಮೇಲೆ ಮುಗಿಯದ ಮುನಿಸು

## ಪತ್ರಕರ್ತರನ್ನು ಮೊಗಸ್ಸಾಲೆಯಿಂದಲೂ ಎತ್ತಂಗಡಿ ಮಾಡಿಸಿದ ಸ್ಪೀಕರ್

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ವಿಧಾನಸಭಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ದಿನದಿಂದಲೇ ಆರಂಭವಾಗಿರುವ ಮಾಧ್ಯಮದವರ ಮೇಲಿನ ಮುನಿಸು ಇನ್ನೂ ಕೊನೆಯಾಗಿಲ್ಲ.

ಸರಕಾರ ಅಧಿಕಾರಕ್ಕೆ ಬಂದು ವಿಧಾನಸಭಾಧ್ಯಕ್ಷರ ಕುರ್ಚಿಯಲ್ಲಿ ಕೂಳಿತುಕೊಳ್ಳುತ್ತಿದ್ದಂತೆ ಸದನದೊಳಗೆ ಖಾಸಗಿ ಸುದ್ದಿ ವಾಹಿನಿಗಳ ಕ್ಯಾಮೆರಾಗಳನ್ನು ನಿರ್ಬಂಧಿಸಿದ್ದರು. ಇದಾದ ಕೆಲವೇ ದಿನಗಳಲ್ಲಿ ಶಾಸಕರ ಭವನಕ್ಕೂ ಪತ್ರಕರ್ತರಿಗೆ ನಿಷೇಧ ಹೇರಿದ್ದರು. ಬಜೆಟ್ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಮಾಧ್ಯಮದವರಿಗೆ ಕೊಡಲು ಬಜೆಟ್ ಪುಸ್ತಕ ನೀಡಿದ್ದರೂ ಕಾಗೇರಿಯವರು ಕೊಡಲು ನಿರಾಕರಿಸಿದ್ದರು. ಇದೀಗ ವಿಧಾನಸಭೆಯ ಮೊಗಸಾಲೆಯಲ್ಲಿ ಪತ್ರಕರ್ತರು ಕೂಳಿತುಕೊಳ್ಳುವಂತಿಲ್ಲ ಎಂಬ ಹೊಸ ಫರ್ಮಾನು ಹೊರಡಿಸುವ ಮೂಲಕ ಮಾಧ್ಯಮದ ಮೇಲಿನ ಕೋಪವನ್ನು ಮತ್ತೆ ಹೊರಹಾಕಿದ್ದಾರೆ.

ಪ್ರತಿಪಕ್ಷದವರು ಇರುವ ಮೊಗಸಾಲೆಯಲ್ಲಿ ಪತ್ರಕರ್ತರು ಕುಳಿತುಕೊಳ್ಳುವುದು ಹಲವು ದಶಕಗಳಿಂದಲೇ ಇರುವ ಪದ್ಧತಿ. ಆಡಳಿತ ಪಕ್ಷದ

### ಸಿಎಂ ಮಾತಿಗೂ ಕಿಮ್ಮತ್ತು ಕೊಡದ ವಿಧಾನಸಭಾಧ್ಯಕ್ಷ

**ಸಾಂವಿಧಾನಿಕ ಪೀಠವಾಗಿರುವ ವಿಧಾನಸಭಾಧ್ಯಕ್ಷರ ರೂಲಿಂಗ್ ಅಥವಾ ಆದೇಶವನ್ನು ಯಾರೂ ಪ್ರಶ್ನಿಸುವಂತಿಲ್ಲ. ಆದರೆ ಆಡಳಿತ ಪಕ್ಷದ ನಾಯಕರು, ಮುಖ್ಯಮಂತ್ರಿಗಳಾದವರು ಅನೌಪಚಾರಿಕವಾಗಿ ಕೆಲ ಸೂಚನೆಗಳನ್ನು ನೀಡುತ್ತಾರೆ. ಮುಖ್ಯಮಂತ್ರಿಗಳಿಂದ ಬರುವ ಬಹುತೇಕ ಆದೇಶಗಳನ್ನು ಸ್ಪೀಕರ್ ಕೇಳುತ್ತಾರೆ. ಆದರೆ ಮಾಧ್ಯಮದವರ ನಿರ್ಬಂಧ ತೆರವುಗೊಳಿಸುವಂತೆ ಸ್ವತಃ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಕಾಗೇರಿ ಅವರಿಗೆ ಸೂಚನೆ ನೀಡಿದರೂ ಕ್ಯಾರೆ ಎನ್ನುತ್ತಿಲ್ಲ. ಕಾಗೇರಿ ಅವರ ಈ ವರ್ತನೆ ಮುಖ್ಯಮಂತ್ರಿ ಕಚೇರಿ ಹಾಗೂ ಸ್ಪೀಕರ್ ಕಚೇರಿ ನಡುವೆ ಕಂದಕ ಸೃಷ್ಟಿಸುತ್ತಿದೆ ಎನ್ನುವ ಮಾತುಗಳು ಕೇಳಿಬಂದಿವೆ.**



ಮೊಗಸಾಲೆಯಲ್ಲಿಯೂ ಪತ್ರಕರ್ತರು ಕುಳಿತುಕೊಂಡು ಶಾಸಕರೊಂದಿಗೆ ಚರ್ಚಿಸುತ್ತಾರೆ. ಆದರೆ ಸೋಮವಾರ ಬೆಳಗ್ಗೆ ಏಕಾಏಕಿ ಮಾಧ್ಯಮದವರು ವಿಧಾನಸಭೆಯ ಮೊಗಸಾಲೆಯಲ್ಲಿ ಕುಳಿತುಕೊಳ್ಳುವಂತಿಲ್ಲ ಎಂದು ಸ್ಪೀಕರ್ ಕಾಗೇರಿಯವರು ಸೂಚನೆ ನೀಡಿದ್ದಾರೆ.

ಸ್ಪೀಕರ್ ಕಚೇರಿಯಿಂದ ಬಂದಿರುವ ಈ ಸೂಚನೆಯನ್ನು ಮಾರ್ಷಲ್‌ಗಳು ಪಾಲಿಸಿದ್ದು, ಮಾಧ್ಯಮದವರಿಗೆ ಮೊಗಸಾಲೆಯಲ್ಲಿ ಕೂಳಿತುಕೊಳ್ಳಲು ಅವಕಾಶ ನೀಡಲಿಲ್ಲ. ಈ ಬಗ್ಗೆ ಪತ್ರಕರ್ತರು ಪ್ರಶ್ನಿಸಿದ್ದಕ್ಕೆ ಮಾರ್ಷಲ್‌ಗಳು ಏರುಧ್ವನಿಯಲ್ಲಿ ಮಾತನಾಡಿದ್ದಾರೆ. ಬಳಿಕ ಈ ಸುದ್ದಿ ಬಿತ್ತರವಾಗುತ್ತಿದ್ದಂತೆ, ತಮ್ಮ ನಿಲುವನ್ನು ಬದಲಾಯಿಸಿಕೊಳ್ಳಲು ಸ್ಪೀಕರ್ ಮುಂದಾಗಿದ್ದಾರೆ ಎಂದು ತಿಳಿದುಬಂದಿದೆ.

**ಕಾಗೇರಿ ನಡೆಗೆ ಆಕ್ಷೇಪ:** ಮೊಗಸಾಲೆಯಲ್ಲಿ ಮಾಧ್ಯಮದವರನ್ನು ನಿರ್ಬಂಧಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಆಡಳಿತ ಹಾಗೂ ಪ್ರತಿಪಕ್ಷದ ಶಾಸಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇಷ್ಟು ದಿನ ಮಾಧ್ಯಮದವರಿಗೆ ಮೊಗಸಾಲೆಯಲ್ಲಿ ಅವಕಾಶ ನೀಡಲಾಗಿತ್ತು. ಇದರಿಂದ ಹಲವು ವಿಚಾರ ವಿನಿಮಯವಾಗುತ್ತಿದ್ದವು. ಆದರೆ ಈ ರೀತಿಯ ನಿರ್ಧಾರದಿಂದ ಮಾಧ್ಯಮ ಹಾಗೂ ಶಾಸಕರನ್ನು ದೂರ ಮಾಡಿದಂತಾಗುತ್ತದೆ ಎಂದು ಆಡಳಿತ ಪಕ್ಷದ ಕೆಲ ಶಾಸಕರೇ ಕಾಗೇರಿಯವರಿಗೆ ಕಿವಿಮಾತು ಹೇಳಿದ್ದಾರೆ ಎನ್ನಲಾಗಿದೆ.

ಸಂವಿಧಾನದ ಆಶಯ ನುಡಿ ಹೇಳುವಾಗ ಪತ್ರಿಕಾ